ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 28 ಎಂಆರ್‌ಆರ್ 2001

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 7ನೇ ಜುಲೈ 2001.

## ಸುತ್ತೋಲೆ

ವಿಷಯ: ಭೂ ದಾಖಲೆಗಳ ಗಣಕೀಕರಣ - ಭೂಮಿ ಮ್ಯುಟೇಷನ್ ಮಾಡ್ಯುಲ್ ನಲ್ಲಿ ಅನುಮೋದನೆ ನೀಡಲು ತಹಸೀಲ್ದಾರರಿಗೆ ಇರುವ ಅಧಿಕಾರದ ವ್ಯಾಪ್ತಿಯ ಕುರಿತು.

ಭೂಮಿ ಮ್ಯುಟೇಷನ್ ಮಾಡ್ಯುಲ್ ನಲ್ಲಿ ಅನುಮೋದನೆ ನೀಡಲು ತಹಸೀಲ್ದಾರರಿಗೆ ಇರುವ ಅಧಿಕಾರದ ವ್ಯಾಪ್ತಿಯ ಕುರಿತು ಕೆಲವು ತಪ್ಪು ತಿಳುವಳಿಕೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 262 ಟಿಆರ್‌ಎಂ 96 ದಿನಾಂಕ 11ನೇ ಆಗಸ್ಟ್ 2000 ಮತ್ತು ಸುತ್ತೋಲೆ ಸಂಖ್ಯೆ ಕಂಇ 262 ಟಿಆರ್‌ಎಂ 96(ಭಾ) ದಿನಾಂಕ 29ನೇ ಮೇ 2001 ರನ್ವಯ ಕಂದಾಯ ನಿರೀಕ್ಷಕರು ಮಾತ್ರ ಮ್ಯುಟೇಷನ್ ಅನ್ನು ಅಂಗೀಕರಿಸಲು ಅಧಿಕಾರ ಹೊಂದಿರುತ್ತಾರೆ. ಭೂಮಿ ಸಾಫ್ಟ್ ವೇರ್ ನಲ್ಲಿ ಎಲ್ಲಾ ಮ್ಯುಟೇಷನ್ ಗಳಿಗೆ ಅಂತಿಮವಾಗಿ ಅನುಮೋದನೆಯನ್ನು ತಹಸೀಲ್ದಾರರು ನೀಡಬೇಕಾಗಿರುತ್ತದೆ. ಇದರ ಉದ್ದೇಶವು ಕಂದಾಯ ನಿರೀಕ್ಷಕರ ಅಧಿಕಾರವನ್ನು ಕಿತ್ತುಕೊಳ್ಳುವುದಾಗಲಿ ಅಥವಾ ತಹಸೀಲ್ದಾರರಿಗೆ ಹೆಚ್ಚುವರಿ ಅಧಿಕಾರವನ್ನು ನೀಡುವುದಾಗಲಿ ಖಂಡಿತಾ ಆಗಿರುವುದಿಲ್ಲ. ಕಂದಾಯ ನಿರೀಕ್ಷಕರು ಆದೇಶ (ಕ್ಷೇತ್ರದಲ್ಲಿ ಆದೇಶ ಹೊರಡಿಸಿದಂತೆ) ಹೊರಡಿಸುವಾಗ ಆದೇಶವನ್ನು ಸ್ಕ್ಯಾನ್ ಮಾಡಲಾಗಿದೆಯೆ, ಸರಿಯಾಗಿ ಟೈಪ್ ಮಾಡಲಾಗಿದೆಯೆ ಮತ್ತು ಆದೇಶದ ವಿವರಗಳಲ್ಲಿ ಬೆರಳಚ್ಚಿನ ತಪ್ಪುಗಳೇನಾದರೂ ಇದೆಯೇ ಎಂಬುದನ್ನು ಪರೀಕ್ಷಿಸಲಷ್ಟೆ ಭೂಮಿ ಸಾಫ್ಟ್ ವೇರ್ ನಲ್ಲಿ ತಹಸೀಲ್ದಾರರ ಅನುಮೋದನೆಗೆ ಅವಕಾಶ ಕಲ್ಪಿಸಲಾಗಿದೆ.

ತಹಸೀಲ್ದಾರರು ಕಂದಾಯ ನಿರೀಕ್ಷಕರ ಆದೇಶವನ್ನು ತಿರಸ್ಕರಿಸಲಾರರು ಮತ್ತು ತಮ್ಮ ಸ್ವಂತ ನಿರ್ಧಾರವನ್ನು ಹೇರಿಸಲಾರರು. ಈ ವಿಷಯದಲ್ಲಿ ತಹಸೀಲ್ದಾರರಿಗೆ ಯಾವುದೇ ರೀತಿಯ ಸ್ವತಂತ್ರ್ಯ ಇರುವುದಿಲ್ಲ. ಕಂದಾಯ ನಿರೀಕ್ಷಕರು ಸರಿಯಾಗಿ ಬೆರಳಚ್ಚು ಮಾಡಲಾಗಿದೆಯೆ ಮತ್ತು ಸ್ಕ್ಯಾನ್ ಮಾಡಲಾಗಿದೆಯೆ ಎಂಬುದನ್ನು ಗಮನಿಸಿದ ಕೂಡಲೆ ಭೂಮಿ ಸಾಫ್ಟ್ ವೇರ್ ನಲ್ಲಿ ಅನುಮೋದನೆ ನೀಡಬೇಕಾಗುತ್ತದೆ. ಕಂದಾಯ ನಿರೀಕ್ಷಕರ ಆದೇಶವು ತಹಸೀಲ್ದಾರರಿಗೆ ತಪ್ಪಾಗಿ ಕಂಡಲ್ಲಿ, ಕರ್ನಾಟಕ ಭೂ ಕಂದಾಯ ನಿಯಮಾವಳಿಯ ಅನುಸಾರ ಸುಧಾರಣಾ ಕ್ರಮ ಕೈಗೊಳ್ಳಬೇಕಾಗುತ್ತದೆ.

ಭೂಮಿ ಸಾಫ್ಟ್ ವೇರ್ ನಲ್ಲಿ ಕಂದಾಯ ನಿರೀಕ್ಷಕರ ಯಾವುದೇ ದೋಷಯುಕ್ತ ಅಥವಾ ತಪ್ಪು ಆದೇಶವನ್ನು ತಹಸೀಲ್ದಾರರು ಅನುಮೋದಿಸಿದಲ್ಲಿ, ತಹಸೀಲ್ದಾರರು ಇದಕ್ಕೆ ಜವಾಬ್ದಾರರಾಗುವುದಿಲ್ಲ. ಈ ರೀತಿಯ ದೋಷಯುಕ್ತ ಅಥವಾ ತಪ್ಪು ಆದೇಶಕ್ಕೆ ಕಂದಾಯ ನಿರೀಕ್ಷಕರು ಮಾತ್ರ ಜವಾಬ್ದಾರರಾಗುತ್ತಾರೆ.

ಈ ಸುತ್ತೋಲೆಯು ಕಂದಾಯ ಇಲಾಖೆಯ ಇಂಟರ್ ನೆಟ್ ಸೈಟ್ http://www.revdept.kar.nic.in ನಲ್ಲಿ ಲಭ್ಯವಿರುತ್ತದೆ.

(ಪಿ.ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ ಸುಧಾರಣೆ ಕೋಶ)

ಇವರಿಗೆ,

ಎಲ್ಲಾ ಜಿಲ್ಲಾಧಿಕಾರಿಗಳು
(ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರುಗಳಿಗೆ ಈ ಸುತ್ತೋಲೆಯ ಪ್ರತಿಯನ್ನು ಕಳುಹಿಸುವುದು.)